ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಸಿಸಿ ನಂ. 168/2020 | | | |
| | ಪಿ.ಡಬ್ಲೂಃ | 1 | ಸಿಡಬ್ಲೂಃ | 1 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.10.2023 | | | |
| ಸಾಕ್ಷಿದಾರರ ಹೆಸರುಃ | ಭೀಮಪ್ಪ ತಂದೆ ಹನಮಪ್ಪ ಶಿರಹಟ್ಟಿ | | | |
| ವಯಸ್ಸುಃ | 87 ವರ್ಷ, | | | |
| ಉದ್ಯೋಗಃ | – | | | |
| ವಾಸಸ್ಥಳಃ | ಮುಂಡವಾಡ | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

1. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ನನ್ನ ಮಗ ಮತ್ತು ಸೊಸೆ ಇರುತ್ತಾರೆ. ಚಾಸಾ 4 ರಿಂದ 7 ನನ್ನ ಸಂಬಂಧಿಕರು ಇರುತ್ತಾರೆ. 3 ವರ್ಷಗಳ ಹಿಂದೆ ರಾತ್ರಿ 11 ಗಂಟೆ ಸುಮಾರಿಗೆ ನಮ್ಮ ಹೊಲದಲ್ಲಿ ದಾರಿ ಮಾಡಿದ್ದರು. ನಾನು ಅದನ್ನು ಮುಚ್ಚಲು ಹೋಗಿದ್ದೆ. ಆಗ ಆರೋಪಿತರಿಬ್ಬರು ಅಲ್ಲಿಗೆ ಬಂದು, 1 ನೇ ಆರೋಪಿ ಕಟ್ಟಿಗೆಯಿಂದ ಮತ್ತು 2 ನೇ ಆರೋಪಿ ಕೊಡಲಿಯಿಂದ ನನ್ನ ತಲೆಗೆ ಹೊಡೆದರು. ಆಗ ನನಗೆ ತೀವ್ರ ರಕ್ತ ಗಾಯವಾಗಿದ್ದು, ಆಗ ಚಾಸಾ 4 ರವರು ಊರಿಗೆ ಹೋಗಿ ಊರಿನ ಜನರನ್ನು ಕರೆದುಕೊಂಡು ಬಂದರು. ಆಗ ನನಗೆ ರಕ್ತ ಗಾಯವಾಗಿ, ಪ್ರಜ್ಞೆ ತಪ್ಪಿತ್ತು. ಆಗ ಆ್ಯಂಬುಲೆನ್ಸ ಬಂದಿದ್ದು, ನನ್ನನ್ನು ಮುಂಡರಗಿಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ಮುಂದೆ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಗದಗನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು.

2. ನಾನು ಆರೋಪಿತರ ವಿರುದ್ಧ 3 ವರ್ಷದ ಹಿಂದೆ ದೂರು ದಾಖಲಿಸಿದ್ದೇನೆ. ಈ ಮೂರು ವರ್ಷದ ಹಿಂದೆ ನಾನು ತೋರಿಸಿದ ಮೇರೆಗೆ ಬೆಳಿಗ್ಗೆ 10 ಗಂಟೆ ಸುಮಾರಿಗೆ ಘಟನಾ ಸ್ಥಳವಾದ ನಮ್ಮ ಹೊಲದಲ್ಲಿ ಪೋಲಿಸರು ಘಟನಾ ಸ್ಥಳದ ಪಂಚನಾಮೆ ಜರುಗಿಸಿ, ನಾನು ತೋರಿಸಿದಂತೆ ಪೋಲಿಸರು ಬಡಿಗೆ ಮತ್ತು ಕೊಡಲಿಯನ್ನು ನನ್ನ ಸಮಕ್ಷಮ ಜಪ್ತ ಮಾಡಿದ್ದರು. ಈಗ ನನಗೆ ತೋರಿಸಿದ ವಸ್ತುಗಳು ಅವುಗಳೇ ಆಗಿರುತ್ತವೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದರಿಂದ ಕ್ರಮವಾಗಿ ಮು.ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

3. ಈಗ ನನಗೆ ತೋರಿಸಿದ ದಾಖಲೆಯು ಫಿರ್ಯಾದಿ ಇದ್ದು, ಅದನ್ನು ನನ್ನ ಸಂಬಂಧಿಕ ಕವಲೂರಿನವರು ಬರೆದಿರುತ್ತಾರೆ. ಸದರಿ ಪ್ರಕರಣದ ಕುರಿತು ನಾನು ಪೋಲಿಸರಿಗೆ ಪುನಃ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ ಸ ಅ ರವರು ಅನುಮತಿ ಕೇಳಿದ್ದು ಅನುಮತಿಸಲಾಯಿತು)

**ಪಾಟೀ ಸವಾಲುಃ ಶ್ರೀ ಜಿ.ಜಿ.ಐ ವಕೀಲರಿಂದಃ**

1. ನಾನು ಚಾಸಾ 4 ಮತ್ತು 6 ರವರೊಂದಿಗೆ ಆ ದಿನ ರಾತ್ರಿ ಹೊಲಕ್ಕೆ ಹೋಗಿದ್ದೆ. ನಾವು ಹೋದ ಎಷ್ಟು ಹೊತ್ತಿಗೆ ಆರೋಪಿತರು ಅಲ್ಲಿಗೆ ಬಂದರು ಅಂತಾ ನನಗೆ ಗೊತ್ತಿಲ್ಲ. ಆರೋಪಿತರು ನನಗೆ ಹೊಡೆದಿದ್ದರಿಂದ ರಕ್ತ

ಗಾಯವಾಗಿ, ನನ್ನ ಅಂಗಿಯ ಮೇಲೆ ಬಿದ್ದಿತ್ತು. ಸದರಿ ಅಂಗಿಯನ್ನು ಪೋಲಿಸರಿಗೆ ಕೊಟ್ಟಿಲ್ಲ. ನನ್ನನ್ನು ಆಸ್ಪತ್ರೆಗೆ ಯಾವುದರ ಮೂಲಕ ಸೇರಿಸಿದರು ಅಂತಾ ಪ್ರಜ್ಞೆ ಇಲ್ಲದ ಕಾರಣ ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿ ಪೋಲಿಸರಿಗೆ ಪ್ರಕರಣದ ಕುರಿತು ಯಾವುದೇ ಹೇಳಿಕೆ ನೀಡಿಲ್ಲ. ಘಟನೆಯಾದ 2-3 ದಿನದ ನಂತರ, ಚಾಸಾ 7 ರವರಿಗೆ ಫಿರ್ಯಾದಿ ಬರೆಯಲು ಪೋಲಿಸ್ ಠಾಣೆಯಲ್ಲಿ ನಾನೇ ಮಾಹಿತಿ ನೀಡಿದ್ದೆ. ಆರೋಪಿತರು ರಾಜೀ ಆಗುತ್ತೇನೆ ಅಂತಾ ಕಾಯಿಸಿದ್ದಕ್ಕೆ ತಡವಾಗಿ ದೂರು ದಾಖಲಿಸಿದ್ದೇನೆ. ಈ ಕುರಿತು ಫಿರ್ಯಾದಿಯಲ್ಲಿ ಬರೆಸಿಲ್ಲ.

2. ಘಟನೆಯಾದ 4-5 ದಿನಕ್ಕೆ ಪೋಲಿಸರು ಪಂಚನಾಮೆ ಮಾಡಲು ಬಂದಿದ್ದರು. ಮು.ಮಾ.1 ಮತ್ತು 2 ನ್ನು ಹೊಲದಲ್ಲಿ ಜಪ್ತ ಮಾಡಿರುತ್ತಾರೆ. ಆ ದಿವಸ ಪೋಲಿಸರು ನಮ್ಮ ಮನೆಗೆ ಬಂದ ನಂತರ, ನಾವು ಎಲ್ಲಿಗೂ ಹೋಗಿರುವುದಿಲ್ಲ ಎಂದರೆ ಸರಿ. ಮು.ಮಾ.ಗಳಂತೆ ಸಾಮಾನ್ಯವಾಗಿ ಕಟ್ಟಿಗೆಗಳು ಹೊರಗಡೆ ಸಿಗುತ್ತವೆ ಎಂದರೆ ಸಾಕ್ಷಿಯು ಅವು ಬೇರೆ, ಇವು ಬೇರೆ ಅಂತಾ ನುಡಿಯುತ್ತಾರೆ. ಪೋಲಿಸರಿಗೆ ನಾನು ರಕ್ತ ಕಲೆಯಾದ ಅಂಗಿಯನ್ನು ನಾನು ಕೊಟ್ಟಿಲ್ಲ. ಆದರೆ, ಅದು ಈಗಲೂ ನನ್ನ ಹತ್ತಿರ ಇರುತ್ತದೆ.

3. ನನ್ನ ಕಾಲು 7-8 ವರ್ಷಗಳ ಹಿಂದೆ ಮುರಿದಿರುತ್ತದೆ. ಊರುಗೋಲು ಸಹಾಯವಿಲ್ಲದೇ ನನಗೆ ನಡೆಯಲು ಬರುವುದಿಲ್ಲ ಎಂದರೆ ಸರಿ ಅಲ್ಲ. ನಾನು ನಡೆಯಲು ಬಾರದೇ ಕೆಳಗಡೆ ಬಿದ್ದು, ನನ್ನ ತಲೆಗೆ ಗಾಯಪಡಿಸಿಕೊಂಡಿದ್ದೇನೆ ಎಂದರೆ ಸರಿ ಅಲ್ಲ.

4. ನಾನು ಹೋದ ಜಮೀನು ನನ್ನ ಹೆಂಡತಿಯ ತಾಯಿಯ ಮಾಲ್ಕಿಯಲ್ಲಿರುವ ಜಮೀನು ಎಂದರೆ ಸರಿ. ಸದರಿಯವರು 1 ನೇ ಆರೋಪಿ ಮತ್ತು ನನ್ನ ಇನ್ನೊಬ್ಬ ಮಗನಿಗೆ ಸದರಿ ಜಮೀನನ್ನು ಬಿಟ್ಟುಕೊಟ್ಟಿದ್ದರು ಎಂದರೆ ಸರಿ ಅಲ್ಲ. ಈ ಕಾರಣದಿಂದ ನಾನು ನನ್ನ ಹೆಣ್ಣು ಮಕ್ಕಳ ಜೊತೆ ಸೇರಿಕೊಂಡು, 1 ನೇ ಆರೋಪಿಯೊಂದಿಗೆ ಜಗಳ ಆಡುತ್ತಿದ್ದೆ ಮತ್ತು ಅವರ ಜೊತೆ ಇರುತ್ತಿರಲಿಲ್ಲ ಎಂದರೆ ಸರಿ ಅಲ್ಲ. ಸದರಿ ಜಮೀನಿನ ಕುರಿತು ನನ್ನ ಮತ್ತು ಆರೋಪಿ ನಂ.1 ರವರ ನಡುವೆ ಜಗಳ ಆಗಿ, ರಾಜೀಯಾಗಿತ್ತು ಎಂದರೆ ಸರಿ ಅಲ್ಲ. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡದೇ ಇದ್ದರೂ, ನಾನೇ ಸ್ವತಃ ನನಗೆ ಗಾಯಪಡಿಸಿಕೊಂಡು, ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ ಅಲ್ಲ.

5. ನಾನು ಊರಿನ ಹಿರಿಯರ ಮಾತು ಕೇಳದೇ, ಸುಳ್ಳು ಸಂಗತಿಗಳ ಮೇಲೆ ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ ಅಲ್ಲ. ನಾನು ಜಮೀನಿಗೆ ರಾತ್ರಿ ಸಮಯದಲ್ಲಿ ಹೋಗದೇ ಇದ್ದರೂ, ಆರೋಪಿತರು ನನಗೆ ಮು.ಮಾ.ಗಳಿಂದ ಹೊಡೆದು, ಗಾಯ ಪಡಿಸದೇ ಇದ್ದರೂ, ಪಂಚನಾಮೆ ಮಾಡದೇ ಇದ್ದರೂ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಜೆಎಂಎಫ್‌ಸಿ ಮುಂಡರಗಿ.